# ‘ಫೈನಾನ್ಷಿಯಲ್ ಸೆಕ್ಸ್‌ಟಾರ್ಷನ್’ಗೆ ಇನ್‌ಸ್ಟಾ ಕಾಳಜಿಯ ತಡೆಗೋಡೆ

**ಅಶ್ಲೀಲತೆಯನ್ನೇ ಬಂಡವಾಳವಾಗಿಸಿಕೊಂಡು ಬಳಕೆದಾರರಿಂದ ಸುಲಿಗೆ ಮಾಡುವ ಪ್ರಕರಣಗಳಿಗೆ ಕಡಿವಾಣ ಹಾಕಲು ಇನ್‌ಸ್ಟಾಗ್ರಾಂ ಮುಂದಾಗಿದೆ.**

**■ ಶಶಿಕುಮಾರ್ ಸಿ.**




ಮೆಟಾ ಒಡೆತನದ ಇನ್‌ಸ್ಟಾಗ್ರಾಂ ವಿಶ್ವದೆಲ್ಲೆಡೆಯ ಯುವಕ ಯುವತಿಯರ ಹಾಟ್ ಫೇವರೆಟ್. 18 ವರ್ಷದೊಳಗಿನ ಬಳಕೆದಾರರಿಗಂತೂ ಇನ್‌ಸ್ಟಾಗ್ರಾಂ ಎಂದರೆ ಎಲ್ಲಿಲ್ಲದ ಉತ್ಸಾಹ. ಈ ವೇದಿಕೆಯಲ್ಲಿ, ಎಲ್ಲ ವಯೋಮಾನದ ಬಳಕೆದಾರರನ್ನು ಗುರಿಯಾಗಿಸಿ ಲೈಂಗಿಕ ಶೋಷಣೆಯೂ ನಡೆಯುತ್ತಿರುತ್ತದೆ. ಇದಕ್ಕೆ ಕಡಿವಾಣ ಹಾಕಲು ‘ಇನ್‌ಸ್ಟಾ’ ದಿಟ್ಟ ಹೆಜ್ಜೆಯಿಟ್ಟಿದೆ.

‘ಫೈನಾನ್ಷಿಯಲ್ ಸೆಕ್ಸ್‌ಟಾರ್ಷನ್’ (Financial sextortion– ಅಶ್ಲೀಲ ಫೋಟೊ ಮತ್ತು ವಿಡಿಯೊಗಳನ್ನು ಕಳುಹಿಸಿ ಹಣಕ್ಕಾಗಿ ಬೆದರಿಕೆ ಹಾಕುವುದು) ಘನಘೋರ ಕೃತ್ಯ. ಇನ್‌ಸ್ಟಾಗ್ರಾಂನಂತಹ ಸೋಷಿಯಲ್ ಮೀಡಿಯಾಗಳ ಮೂಲಕ ಇಂತಹ ಕೃತ್ಯಗಳು ಜಗತ್ತಿನಾದ್ಯಂತ ದಿನೇ ದಿನೇ ಹೆಚ್ಚಾಗುತ್ತಿವೆ. ಈ ಬಗ್ಗೆ ನೈತಿಕ ಹೊಣೆಗಾರಿಕೆ ಹೊತ್ತ ಇನ್‌ಸ್ಟಾಗ್ರಾಂ, ಇದಕ್ಕೆ ಕಡಿವಾಣ ಹಾಕಲು ಹೊಸ ಫೀಚರ್ ಅಭಿವೃದ್ಧಿಪಡಿಸುತ್ತಿದೆ.

‘ಫೈನಾನ್ಷಿಯಲ್ ಸೆಕ್ಸ್‌ಟಾರ್ಷನ್’ ಎಂಬುದು ಹಣಕ್ಕಾಗಿ ಸೈಬರ್ ಖದೀಮರು, ಹ್ಯಾಕರ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಬಳಸುವ ಒಂದು ತಂತ್ರ. ಉದಾಹರಣೆಗೆ, ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರನ್ನು ಪುಸಲಾಯಿಸಿ ಅವರಿಂದ ನಗ್ನ ವಿಡಿಯೊ ಅಥವಾ ಫೋಟೊಗಳನ್ನು ಕಳುಹಿಸುವಂತೆ ಪ್ರೇರೇಪಿಸಿ, ಬಳಿಕ ಅದೇ ವಿಡಿಯೊ ಮತ್ತು ಫೋಟೊಗಳನ್ನು ಬಳಸಿಕೊಂಡು ಹಣಕ್ಕಾಗಿ ಬೇಡಿಕೆ ಇಡುವುದು ಅಥವಾ ಬಳಕೆದಾರರದ್ದೇ ಮುಖ ಹೋಲುವ ರೀತಿ ಅಶ್ಲೀಲ ವಿಡಿಯೊ, ಚಿತ್ರಗಳನ್ನು ರಚಿಸಿ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡುವ ಬೆದರಿಕೆಯೊಡ್ಡಿ ಹಣಕ್ಕಾಗಿ ಒತ್ತಾಯಿಸುವುದು. ಒಟ್ಟಾರೆಯಾಗಿ ಅಶ್ಲೀಲತೆಯನ್ನೇ ಬಂಡವಾಳವಾಗಿಟ್ಟುಕೊಂಡು ಸುಲಿಗೆ ಮಾಡುವುದೇ ಫೈನಾನ್ಷಿಯಲ್ ಸೆಕ್ಸ್‌ಟಾರ್ಷನ್ ಎನ್ನಬಹುದು.

ಹೊಸ ಫೀಚರ್ ಇನ್ನೂ ಪ್ರಾಯೋಗಿಕ ಹಂತದಲ್ಲಿದ್ದು, ಫೈನಾನ್ಷಿಯಲ್ ಸೆಕ್ಸ್‌ಟಾರ್ಷನ್ ಕೃತ್ಯದಿಂದ ಬಳಕೆದಾರರಿಗೆ ಸುರಕ್ಷತೆ ಒದಗಿಸುವುದೇ ಇದರ ಮುಖ್ಯ ಕಾರ್ಯ. ಇನ್‌ಸ್ಟಾಗ್ರಾಂ ಬಳಕೆದಾರರಿಗೆ ಯಾವುದೇ ವ್ಯಕ್ತಿ ಅಶ್ಲೀಲತೆಯ ವಿಡಿಯೊ ಅಥವಾ ಚಿತ್ರಗಳನ್ನು ಕಳುಹಿಸುವುದಕ್ಕೆ ನಿರ್ಬಂಧ ಹೇರುವುದು ಇದರ ಕಾರ್ಯ. ಅಲ್ಲದೆ ಆ ಬಗ್ಗೆ ಎಚ್ಚರಿಕೆಯ ಸಂದೇಶಗಳನ್ನೂ ಬಳಕೆದಾರರಿಗೆ ತಕ್ಷಣವೇ ಕಳುಹಿಸುತ್ತದೆ. ಇದರಿಂದಾಗಿ ಬಳಕೆದಾರರು ಸುಲಿಗೆಕೋರರ ಕುತಂತ್ರಕ್ಕೆ ಬಲಿಯಾಗುವುದು ತಪ್ಪಲಿದೆ. ಒಂದು ವೇಳೆ ಬಳಕೆದಾರರು ವಿವೇಚನೆಯಿಂದ ಇಂತಹ ವಿಡಿಯೊ ಅಥವಾ ಚಿತ್ರಗಳನ್ನು ಕಳುಹಿಸಲು ಮತ್ತು ಸ್ವೀಕರಿಸಲು ಇಚ್ಛಿಸಿದರೆ ಅದಕ್ಕೂ ಪ್ರತ್ಯೇಕ ಅನುಮತಿ ಒದಗಿಸುತ್ತದೆ.

ನಗ್ನತೆಯ ಚಿತ್ರಗಳು ಬಂದಾಗ ಆ ಬಗ್ಗೆ ಎಚ್ಚರಿಕೆಯಿಂದ ಇರುವಂತೆ ನೋಟಿಫಿಕೇಷನ್ ಕಳುಹಿಸುವ ಇನ್‌ಸ್ಟಾಗ್ರಾಂ, ಇದನ್ನು ನೋಡಲು ಬಳಕೆದಾರರು ನಿರಾಕರಿಸಿದರೆ ಫೋಟೊ ಅಥವಾ ವಿಡಿಯೊವನ್ನು ಕಳುಹಿಸುವುದನ್ನು ಮತ್ತು ಸ್ವೀಕರಿಸುವುದನ್ನು ರದ್ದುಗೊಳಿಸುತ್ತದೆ. ಇದರ ಜತೆಗೆ ಬಳಕೆದಾರರಿಗೆ ಮಟ್ಟಾದ ಸುರಕ್ಷತಾ ಸಲಹೆಗಳನ್ನು ಕೂಡ ಒದಗಿಸುತ್ತದೆ. ಹಂಚಿಕೊಂಡ ವಿಡಿಯೊ ಅಥವಾ ಚಿತ್ರಗಳ ಸ್ಕ್ರೀನ್‌ಶಾಟ್ ಅಥವಾ ಫಾರ್ವರ್ಡ್ ಆಗಿರುವ ಬಗ್ಗೆಯೂ ಸಲಹೆ ನೀಡುತ್ತದೆ.

18 ವರ್ಷದೊಳಗಿನ ಬಳಕೆದಾರರಿಗೆ ಅಶ್ಲೀಲತೆಯ ವಿಡಿಯೊ ಅಥವಾ ಚಿತ್ರಗಳನ್ನು ಕಳುಹಿಸಲು ಇನ್‌ಸ್ಟಾಗ್ರಾಂ ತಾನಾಗಿಯೇ ನಿರ್ಬಂಧ ಹೇರುತ್ತದೆ. ಡಿಫಾಲ್ಟ್ ಆಗಿ ಆಫ್ ಆಗಿರುವ ಈ ಆಯ್ಕೆಯನ್ನು ಮಕ್ಕಳು ಯಾವುದೇ ಕಾರಣಕ್ಕೂ ಆನ್ ಮಾಡಲು ಆಗುವುದಿಲ್ಲ. ಇದರಿಂದಾಗಿ ಅಶ್ಲೀಲ ವಿಡಿಯೊ ಅಥವಾ ಚಿತ್ರಗಳು ಒಳಬರಲು ಮತ್ತು ಹೊರಹೋಗಲು ವಯಸ್ಕ ಬಳಕೆದಾರರ ಖಾತೆಯಲ್ಲಿರುವಂತೆ ಅವಕಾಶ ಇರುವುದಿಲ್ಲ.

ಅಶ್ಲೀಲ ವಿಡಿಯೊ ಹಾಗೂ ಚಿತ್ರಗಳನ್ನು ಬ್ಲರ್ ಮಾಡಿ, ಎಚ್ಚರಿಸುವ ಮೂಲಕ ‘ಡೈರೆಕ್ಟ್ ಮೆಸೇಜ್’ಗಳಲ್ಲಿ (ಡಿಎಂ) ಅನಗತ್ಯವಾಗಿ ನಗ್ನತೆಯು ನುಸುಳುವುದಕ್ಕೆ ತಡೆಯೊಡ್ಡುತ್ತದೆ. ಇಂತಹ ವಿಡಿಯೊ ಮತ್ತು ಚಿತ್ರಗಳಿಗೆ ಪ್ರತಿಕ್ರಿಯಿಸದಂತೆ ಸಂದೇಶವನ್ನು ಕೂಡ ಕಳುಹಿಸುತ್ತದೆ. ಇದರ ಜತೆಗೆ ಇಂತಹ ಸಂದೇಶ ಕಳುಹಿಸುವವರನ್ನು ನಿರ್ಬಂಧಿಸಲು ಮತ್ತು ಈ ಬಗ್ಗೆ ವರದಿ ಮಾಡುವ ಆಯ್ಕೆಯನ್ನು ಬಳಕೆದಾರರಿಗೆ ನೀಡಿದೆ.

ತನ್ನ ಬಳಕೆದಾರರ ಸುರಕ್ಷತಾ ಕ್ರಮಗಳ ಕುರಿತು ಪ್ರಕಟಣೆ ಹೊರಡಿಸಿರುವ ಇನ್‌ಸ್ಟಾಗ್ರಾಂ, ‘ಡೈರೆಕ್ಟ್ ಮೆಸೇಜ್ ನ್ಯೂಡಿಟಿ ಪ್ರೊಟೆಕ್ಷನ್ ಫೀಚರ್ ಅನ್ನು ನಾವು ಶೀಘ್ರವೇ ಬಿಡುಗಡೆ ಮಾಡಲಿದ್ದೇವೆ. ಇದರಿಂದ ಬಳಕೆದಾರರ ಖಾಸಗೀತನಕ್ಕೆ ಸುರಕ್ಷತೆ ಸಿಗಲಿದೆ. ಪ್ರಾರಂಭಿಕ ಹಂತವಾಗಿ ಈ ಫೀಚರ್ ಅನ್ನು ನಮ್ಮ ವೇದಿಕೆಯಲ್ಲೇ ಪರಿಚಯಿಸುತ್ತಿದ್ದು, ಕ್ರಮೇಣ ಮಟ್ಟಾದ ಇತರ ಆ್ಯಪ್‌ಗಳಿಗೂ ಇದು ವಿಸ್ತಾರಗೊಳ್ಳಲಿದೆ. ಈ ಫೀಚರ್, ಅಶ್ಲೀಲ ವಿಡಿಯೊ ಅಥವಾ ಚಿತ್ರಗಳನ್ನು ಕಳುಹಿಸಿ ಹಣಕ್ಕಾಗಿ ಬೇಡಿಕೆ ಸಲ್ಲಿಸುವುದಕ್ಕೂ ನಿರ್ಬಂಧಿಸುತ್ತದೆ’ ಎಂದಿದೆ. ■